**O.S. 67/2010**

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರ.ವ. ಬೋದಿಸಲಾಯಿತು ದಿಃ30-07-15

ಮುಂದುವರೆದ ಪಾಟೀಸವಾಲುಃ ಎಂಪಿ ವಕೀಲರಿಂದ

ಶಿವರಾಮು ನನ್ನ ತಾಯಿ ಹೆಸರಿಗೆ ಬರೆದುಕೊಟ್ಟ ದಾನ ಪತ್ರದ ಆಧಾರದ ಮೇಲೆ ನನ್ನ ತಾಯಿ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ಇತರೆ ಆಸ್ತಿಗಳು 2ನೇ ಪ್ರತಿವಾದಿ ಹೆಸರಿಗೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ, ನಿಪಿಃ 20 ಕ್ರಯಪತ್ರದಲ್ಲಿ ಕಾಣಿಸಿರುವ ಆಸ್ತಿಗಳನ್ನು ಯಾರು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ, ಬೇಕಾದರೆ ನಾನು ನೋಡಿ ಹೇಳುತ್ತೇನೆ. ನಾನು ಹಾಜರುಮಾಡಿರುವ ನಿಪಿಃ 21 ವಿಲ್‌ನ್ನು ಶಿವರಾಮು 2ನೇ ಪ್ರತಿವಾದಿ ಹೆಸರಿಗೆ ಬರೆದಿರುತ್ತಾರೆ ಎಂದರೆ ಸರಿ. ನಿಪಿಃ 21 ನ್ನು ಶಿವರಾಮು ಬರೆದುಕೊಟ್ಟಿರುವುದಿಲ್ಲ. ನಿಪಿಃ21 ರಲ್ಲಿ ಶಿವರಾಮು 2ನೇ ಪರತಿವಾದಿಯನ್ನು ತನ್ನ ದತ್ತು ಮಗ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿ ನಾನು ಒಪ್ಪಿಕೊಳ್ಳುವುದಿಲ್ಲ ಎಂದು ತಿಳಿಸುತ್ತಾರೆ. ನಿಪಿಃ 21 ಕ್ಕೆ ನನ್ನ ತಾಯಿ ಸಾಕ್ಷಿಯಾಗಿ ಸಹಿ ಮಾಡಿಲ್ಲ. ನಿಪಿಃ 21 ಕ್ಕೆ ಶಿವರಾಮು ಬರೆದುಕೊಟ್ಟಿದ್ದರೂ ಕೂಡ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನಿಪಿಃ 12 ಮತ್ತು 13 ನ್ನು ದಾವೆಗಾಗಿ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ, ನನ್ನ ತಂದೆ ಎಸ್‌ಎಸ್‌ಎಲ್‌ಸಿ ವರೆಗೆ ವ್ಯಾಸಾಂಗ ಮಾಡಿರುತ್ತಾರೆ. ದಾಖಲೆಯನ್ನು ಹಾಜರುಮಾಡಲು ನನಗೆ ತೊಂದರೆ ಇಲ್ಲ . ಹೆಚ್‌ವಿ ಲಿಂಗೇಗೌಡರ ಆಸ್ತಿಯನ್ನು ನಾನು , ನನ್ನ ತಾಯಿ ಮತ್ತು ನನ್ನ ದೊಡ್ಡಪ್ಪ ಸಿದ್ದಪ್ಪ , ಮತ್ತು ನನ್ನ ದೊಡ್ಡಪ್ಪನ ಮಕ್ಕಳು ಮಲ್ಲೇಗೌಡರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಸಾಕ್ಷಿ ಈ ಬಗ್ಗೆ ದೃಢೀಕೃತ ಕ್ರಯಪತ್ರವನ್ನುನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿಃ 1 ಎಂದು ಗುರುತಿಸಲಾಯಿತು. ಸದರಿ ನಿಡಿಃ 1 ರಲ್ಲಿ ನನ್ನ ತಂದೆ ಪುಟ್ಟಸ್ವಾಮಿ ಶಿವರಾಮು ರವರ ದತ್ತು ಮಗ ಎಂದು ಬರೆದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳೆಲ್ಲವೂ ಶಿವರಾಮು ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ , ನನ್ನ ತಂದೆ ಪುಟ್ಟಸ್ವಾಮಿ ಶಿವರಾಮು ರವರ ದತ್ತು ಮಗನಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯನ್ನು ಶಿವರಾಮು ರವರು ಎಂದೂ ಸಹ ದತ್ತು ತೆಗೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ , ಶಿವರಾಮು ಎಂದೂ ಕೂಡ ನನ್ನ ತಂದೆಯನ್ನು ದತ್ತು ಮಗ ಎಂದು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಪುಟ್ಟಸ್ವಾಮಿ ಶಿವರಾಮು ರವರ ದತ್ತು ಮಗನಲ್ಲದೆ ಇರುವುದರಿಂದ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ವಗೈರೆ ಇರುವುದಿಲ್ಲ ಎಂದರೆ ಸರಿಯಲ್ಲ, ಶಿವರಾಮು ರವರಿಗೆ ಬಾದ್ಯಪಟ್ಟ ಆಸಿತಗಳಲ್ಲಿ ನಾನು ಭಾಗ ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಶಾಲಾ ದಾಖಲಾತಿಗಳನ್ನು ಹಾಜರುಮಾಡಿದರೆ ಸತ್ಯ ಗೊತ್ತಾಗುತ್ತದೆ ಎಂದು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ.

ಆಹ್ವಾನ ಪತ್ರಿಕೆಯನ್ನು ಮುದ್ರಿಸುವ ಮೊದಲು ಲಗ್ನ ಪತ್ರಿಕೆಯನ್ನು ತಯಾರಿಸುತ್ತಾರೆ ಎಂದರೆ ಸರಿ , ಅದನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿ , ಈ ಕೇಸಿಗಾಗಿ ನಾನು ನಿಪಿಃ 12 ಮತ್ತು 13 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ, 2ನೇ ಪ್ರತಿವಾದಿ 5 ಮತ್ತು 6ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವ ಸ್ವತ್ತುಗಳನ್ನು ಪ್ರಶ್ನೆ ಮಾಡಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ದೇವಮ್ಮ ರವರ ಯಜಮಾನರು ಚಿಂತಾಜನಕ ಸ್ಥಿತಿಯಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ನನ್ನ ತಂದೆ ಜೊತೆ ಒಡಹುಟ್ಟಿದವರು ಎಂದರೆ ಸರಿ , ಅವರ ವಾಸ ಎಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಧವಾದ ಹಕ್ಕು ವಗೈರೆ ಇಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ಹೊಡೆಯಲು ನನ್ನ ತಂದೆ ಶಿವರಾಮು ರವರ ದತ್ತು ಮಗ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ**

ಪಾಟೀಸವಾಲುಃ 3 ರಿಂದ 7ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶಕೇಳಿರುತ್ತಾರೆ ನೀಡಿ ಮುಂದೂಡಲಾಗಿದೆ

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಕೊಳ್ಳೇಗಾಲ**